ಶ್ರೀ ಎಸ್. ಎಂ. ಕೃಷ್ಣ.—ಅದು ನನ್ನ ಗಮನಕ್ಕೆ ಬಂದಿಲ್ಲ, ಇದು ವಿಚಾರಣೆಗೆ ಯೋಗ್ಯ ವಾಗಿರಿತಕ್ಕ ಮಾತು.

ಅಧ್ಯಕ್ಷರು.—ಶ್ರೀ ಸಿ. ವಿ. ಪೆಂಕಟರಾಯಪ್ಪನವರ ಪ್ರಶ್ನೆಯನ್ನು ನಂತರ ತೆಗೆದುಕೊಳ್ಳಲಾಗುವುದು.

ENCROACHMENT OF GOVERNMENT LANDS BY KERALITES IN BORDER TALUKS.

912. Sri K. SUBRAMANYA GOWDA (Belthangadi).—

Will the Chief Minister be pleased to state :—

(*a*) the extent of Government lands encroached upon by the Keralites in the Border Taluks of Belthangadi, Sullia and Puttur, South Kanara District ;

(*b*) of them the number of cases in which land was encroached upon—

(i) since one to two years ago—

(ii) since two to five years ago—

(iii) since five to ten years ago—

(iv) since more than ten years ago ;

(*c*) the total extent of area in each taluk involved in such encroachment ;

(*d*) the steps the Government have taken to set right the same ?

Sri H. M. CHANNABASAPPA (Minister for Public Works and Electricity) [On behalf of Sri D. DEVARAJ URS (Chief Minister)].—

(*a*) 1,741-71 acres.

(*b*) (i) 65
(ii) 93
(iv) 149
(iv) 278.

(*c*) Belthangadi .. 113–00
Sullia .. 28–45
Puttur .. 1,600–26.

(*d*) Action is being taken to regularise or to evict as per the Mysore Land Revenue (Regularisation of Unauthorised Occupation of Lands) Rules, 1970.

ಶ್ರೀ ಕೆ. ಸುಬ್ರಹ್ಮಣ್ಯಗೌಡ.—ಪ್ರತಿವರ್ಷ ಕೇರಳದವರು ಸರ್ಕಾರಿ ಜಮೀನನ್ನು ಅಕ್ರಮಣ ಮಾಡಿ ಸಾಗುವಳಿ ಮಾಡುತ್ತಾ ಇರುವುದು ಕಾಣುತ್ತಿದೆ. ಮುಂದೆ ಈ ರೀತಿ ಭೂಮಿಯನ್ನು ಅಕ್ರಮಣ ಮಾಡದ ಹಾಗೆ ಯಾವ ಕ್ರಮವನ್ನು ಕೈಗೊಂಡಿದ್ದೀರಿ ?

ಶ್ರೀ ಎಚ್ ಎಂ. ಚೆನ್ನಬಸಪ್ಪ.—ಅಕ್ರಮಣಕಾರಿ ಜನಗಳ ಮೇಲೆ ಕ್ರಮವನ್ನು ತೆಗೆದು ಕೊಳ್ಳುವುದಕ್ಕೆ ವಿಧಿ ನಿಯಮದ ಪ್ರಕಾರ ಅವಕಾಶವಿದೆ. ಈಗ ತಾವು ಏನು ಕಳಕಳಿಯನ್ನು ವ್ಯಕ್ತ ಪಡಿಸಿದ್ದೀರಿ ಅದನ್ನು ಸರ್ಕಾರದವರು ಮನಗಂಡಿದ್ದಾರೆ. ಇದರ ಬಗ್ಗೆ ಮುಂದೆ ಈ ರೀತಿಯಾಗ ದಂತೆ ಪೂರ್ವಭಾವಿ ಕ್ರಮಗಳು ಏನು ಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಸುಬ್ರಹ್ಮಣ್ಯಗೌಡ.—ಎರಡು ತಿಂಗಳ ಹಿಂದೆ, ಅಕ್ರಮಣವನ್ನು ನಿಲ್ಲಿಸಲಿಕ್ಕೆ ಹೋದಂಥ ಫಾರೆಸ್ಟ್ ರೇಂಜ್ ಆಫೀಸರ್ ಫಾರೆಸ್ಟ್ ಆಫೀಸರ್ ಅವರ ಮೇಲೆ ಹಲ್ಲೆ ಮಾಡಿ ಅವರ ಜೀಪನ್ನು ಕೂಡ ಕೇರಳದವರು ಪುಡಿ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದು ತಮ್ಮ ಪ್ರಶ್ನೆಯಿಂದ ಉದ್ಭವವಾಗುವುದಿಲ್ಲ. ಆದರೂ ಕೂಡ ಒಂದುವೇಳೆ ಈ ರೀತಿ ನಡೆದಿದ್ದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಈ ತರಹ ಪ್ರಸಂಗ ಗಳು ಪುನಃ ಬಾರದಂತೆ ಏನು ಏರ್ಪಾಡು ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಕೆ. ಸುಬ್ರಹ್ಮಣ್ಯಗೌಡ.—ಈ ಅಕ್ರಮಣಕಾರರ ಸಮಸ್ಯೆಯನ್ನು ಸೆಟಲ್ ಮಾಡುವಂತ ಪ್ರಶ್ನೆ ಎಷ್ಟು ಸಮಯದಲ್ಲಿ ಮುಗಿದೀತು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದು ಪ್ರತಿಯೊಂದು ಕೇಸಿನ ವಿದ್ಯಮಾನಗಳನ್ನು ಅವಲಂಬಿ ಸಿರುತ್ತದೆ. ಯಾರು ಯಾರು ಎಷ್ಟು ದಿವಸಗಳಿಂದ, ಯಾವ ಕಾರಣದಿಂದ ಅಲ್ಲಿ ಕುಳಿತು ವ್ಯವಹಾರ ಮಾಡುತ್ತಿದ್ದಾರೆ, ಏನ್ನುವ ನಾನಾ ವಿವರಗಳನ್ನು ಪರಿಶೀಲನೆಗೆ ತೆಗೆದುಕೊಂಡು, ಯಾರನ್ನು ಎವಿಕ್ಟ್ ಮಾಡಬೇಕು, ಯಾರಿಗೆ ಕನ್‌ಫರಂ ಮಾಡಬೇಕು ಎನ್ನುವುದಕ್ಕೆ ಒಂದೊಂದು ಕೇಸನ್ನೂ ವಿಚಾರಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ತಾವು (ಅ) ಪ್ರಶ್ನೆಗೆ ಉತ್ತರವಾಗಿ 278 ಎಕರೆ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ ಎಂದು ಹೇಳಿದ್ದೀರಿ. 10 ವರ್ಷಗಳಿಂದ 278 ಎಕರೆ ಭೂಮಿಯನ್ನು ಒತ್ತುವರಿ ಮಾಡಿದರೂ ಸಹ ಇದುವರೆಗೆ ಕ್ರಮ ಕೈಗೊಳ್ಳರಾಗುತ್ತಿದೆ ಎಂದು ಹೇಳಿದ್ದೀರಿ, ನಿರ್ದಿಷ್ಟವಾಗಿ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಬ್ಬ ಮನುಷ್ಯ ಅಕ್ರಮಣಮಾಡಿದ ಮೇಲೆ ಅದು ನಮ್ಮ ಗಮನಕ್ಕೆ ಬರುವುದಕ್ಕೆ ಸ್ವಲ್ಪಕಾಲ ಹಿಡಿಯುತ್ತದೆ. ಕಾರಣ ಇದು ಸ್ವಲ್ಪ ಹೆಚ್ಚು ಕಡಿಮೆ ಫಾರೆಸ್ಟ್ ಏರಿಯಾ. ಬಾಕಿಕಡೆ ಎಂದರೆ ಜನಗಳ ಒತ್ತಡ ಇರುವ ಕಡೆ, ಅಕ್ರಮಣ ಮಾಡಿದ ತಕ್ಷಣ ನಮ್ಮ ಗಮನಕ್ಕೆ ಬರುತ್ತದೆ, ಅದು ಗಮನಕ್ಕೆ ಬಂದ ಮೇಲೆ, ಅದರ ಮೇಲೆ ಪರಿಸ್ಥಿತಿಯನ್ನು ನೋಡಿಕೊಂಡು ಯಾವ ಶಾಸನವನ್ನು ಅಪ್ಲೈ ಮಾಡಿ ಅಕ್ರಮಣವನ್ನು ತಪ್ಪಿಸಬೇಕು ಅಥವಾ ಕನ್‌ಫರ್ಮ್ ಮಾಡಬೇಕು ಎನ್ನ ತಕ್ಕಂಥಾದ್ದನ್ನು ವಿಚಾರಮಾಡಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ.—ತಾವು (ಡಿ) ಉತ್ತರವಾಗಿ "Action is being taken to regularise or to evict". ಎಂದು ಹೇಳಿದ್ದೀರಿ. ಬೇರೆ ರಾಜ್ಯದವರು ನಮ್ಮ ಜಮೀನನ್ನು ಅತಿಕ್ರಮವಾಗಿ ಪ್ರವೇಶ ಮಾಡಿದ್ದುದನ್ನು ರೆಗ್ಯುಲರೈಸ್ ಮಾಡತಕ್ಕದ್ದು ಸರ್ಕಾರದ ಇಚ್ಛೆಯೇ? ಅವರನ್ನು ಎವಿಕ್ಟ್ ಮಾಡಿ ನಮ್ಮ ರಾಜ್ಯದಲ್ಲಿ ಜಮೀನು ಇಲ್ಲದವರಿಗೆ ಕೊಡುವ ಇಚ್ಛೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಶಾಸನದಲ್ಲಿ ಅಕ್ರಮಣಕಾರರ ಮೇಲೆ ಕ್ರಮ ತೆಗೆದುಕೊಳ್ಳ ಬೇಕೆಂದು ಇದೆ. ಯಾವ ಜಾತಿಯವರು, ಯಾವ ಊರಿನವರು ಎನ್ನುವ ಆಧಾರದ ಮೇಲೆ ಅಕ್ರಮಣಕಾರರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಶಾಸನದಲ್ಲಿ ಅವಕಾಶ ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—1741—71 ಎಕರೆಗಳು ಒತ್ತುವರಿ ಮಾಡಲಾದ ಜಮೀನಿನ ವಿಸ್ತೀರ್ಣ. ಇದು ಅಷ್ಟೂ ಅರಣ್ಯಭೂಮಿಯಾಗಿದ್ದರೆ, 10 ವರ್ಷಗಳಿಂದಲೂ ಅವರು ಅದನ್ನು ಅನುಭವಿಸುತ್ತಾ ಇದ್ದರೆ, ಕೇರಳದವರು ಪ್ಯೂನೂರಿನಲ್ಲಿ ಪಾಠ ಮಾಡಿದ್ದರೆ ಅವರು ಡಾಮಿಸ್ಯೂರ್ ಆಗುತ್ತಾರೆ. ಈರೀತಿಯ ಅವಕಾಶವನ್ನು ಕಲ್ಪಿಸಿದ್ದಾರೆಯೇ ? ಇಲ್ಲಾ

ಕೇರಳ ಸರ್ಕಾರದವರೊಡನೆ ವ್ಯವಹಾರ ನಡೆಸಿ ಇವರಿಗೆ ಮೈಸೂರಿನ ಎಪಿಕ್ಷನ್ ರೂಲ್ಸ್ ಅಪ್ಲೈ ಮಾಡುತ್ತೀರಾ, ಅಥವಾ ಕೇರಳದ ರೂಲ್ಸ್‌ನ್ನು ಅಪ್ಲೈ ಮಾಡುತ್ತೀರಾ ? ಯಾವರೀತಿ ಮಾಡುತ್ತೀರಿ ಎನ್ನುವುದನ್ನು ತಿಳಿಸಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ರಾಜ್ಯದಲ್ಲಿರತಕ್ಕ ಶಾಸನ ತಪಿತಸ್ಥರಿಗೆ ಅನ್ವಯವಾಗುತ್ತದೆ. ತಪಿತಸ್ಥರು ಮೈಸೂರು ರಾಜ್ಯದಲ್ಲಿರಬಹುದು, ಕೇರಳದಲ್ಲಿರಬಹುದು, ಇಲ್ಲ ತಮಿಳುನಾಡಿನಲ್ಲಿರಬಹುದು. ಇಂಥಿಂಥ ರಾಜ್ಯದವರು ಅಕ್ರಮಣ ಮಾಡಿದರೆ ಇಂತಿಂಥ ಕಾನೂನನ್ನು ಅಪ್ಲೈ ಮಾಡಬೇಕು ಎಂದು ಶಾಸನದಲ್ಲಿಲ್ಲ. ಅಕ್ರಮಣಕಾರರಿಗೆ ಶಿಕ್ಷೆ ಮಾಡಬೇಕು ಎಂದು ಇದೆ. ಪ್ರಾಂತೀಯ ವಿಭಾಗದಮೇಲೆ ಶಾಸನವನ್ನು ನಾವು ಮಾಡಿಲ್ಲ.

DEVELOPMENT OF MELKOTE

419. Sri D. HALAGE GOWDA (Pandavapur).—

Will the Minister for Revenue be pleased to state :—

(*a*) whether it is not a fact that the high level committee was constituted by the Government for the development of Melkote;

(*b*) if so, the progress achieved by the said Committee so far;

(*c*) the details of the proposals submitted by the Committee, if any;

(*d*) the time required for implementation of those proposals ?

Sri N. HUTCHAMASTHY GOWDA (Minister for Revenue).—

(*a*) Yes.

(*b*) The Committee had prepared a master plan at an estimated cost of Rs. 44 lakhs and had recommended to Government for its implementation.

(*c*) The proposals of the Committee are as follows :

(1) To acquire 100 acres of land for establishment of a new satellite town and to construct various types of houses.

(2) Renovation of the Temple.

(3) Water facility, road transport system, hospitals, restaurants, parks and establishment of Sanksrit College.

(*d*) As there is no provision to take up the above works from the funds of the Temple the proposals have been shelved for the time being.

ಶ್ರೀ ಡಿ. ಹಲಗೇಗೌಡ.—ತಾವು "ಸಿ" ಗೆ ಉತ್ತರವಾಗಿ, ನಮಿತಿ ಕೊಟ್ಟಿರತಕ್ಕ ನಲಹೆಗಳನ್ನು ದೇವಸ್ಥಾನದ ಫಂಡಿನಿಂದ ಮೇಲಿನ ಕಾರ್ಯಗಳನ್ನು ಕೈಗೊಳ್ಳಲು ಅವಕಾಶವಿಲ್ಲವೆಂದಕ್ಕೆ, ನದರಿ ನಲಹೆಗಳನ್ನು ನದ್ಯಕ್ಕೆ ಕೈ ಬಿಡಲಾಗಿದೆ ಎಂದು ಹೇಳಿದ್ದೀರಿ. ನಮಿತಿಯನ್ನು ರಚಿಸುವಾಗ ದೇವಸ್ಥಾನದ ಫಂಡಿನಿಂದ ಮಾತ್ರ ಕೆಲಸಗಳನ್ನು ಕೈಗೊಳ್ಳಬೇಕು, ಅದಕ್ಕೆ ನಲಹೆ ಕೊಡಿ ಎಂದು ನಿರ್ದೇಶನವನ್ನು ಕೊಟ್ಟಿದ್ದೀರಾ ?